# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ
## ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು

ಸಂಖ್ಯೆ/ಕ.ಪ.ಪ.ಮೀ.ವಿ.ವಿ/ಟೆಂಡರ್ ಕಮ್ ಹರಾಜು/2025-2026 ದಿನಾಂಕ : 11.06.2025

### ಟೆಂಡರ್ - ಕಂ- ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೀನುಗಾರಿಕಾ ಮಹಾವಿದ್ಯಾಲಯ ಮಂಗಳೂರಿಗೆ ಸೇರಿದ ಇ-ತ್ಯಾಜ್ಯ ಹಾಗೂ ಅನುಪಯುಕ್ತ ವಸ್ತುಗಳನ್ನು ಹರಾಜು ಮಾಡಲು ವಿಶ್ವವಿದ್ಯಾಲಯದ ಅನುಮತಿ ದೊರಕಿರುವ ಹಿನ್ನೆಲೆಯಲ್ಲಿ ಟೆಂಡರ್ ಕಂ ಬಹಿರಂಗ ಹರಾಜು ಪ್ರಕಟಣೆಯನ್ನು ಹೊರಡಿಸಲಾಗಿದೆ. ಆಸಕ್ತರು ಅರ್ಜಿಯ ಜೊತೆಗೆ ರೂ.10,000/- ಡಿಮಾಂಡ್ ಡ್ರಾಫ್ಟ್ ಅನ್ನು **ASSISTANT COMPTROLLER, COLLEGE OF FISHERIES, MANGALORE,** payable at Mangalore ಇವರ ಹೆಸರಿನಲ್ಲಿ ಪಡೆದು ಅರ್ಜಿಗೆ ಲಗತ್ತಿಸಿ ದಿನಾಂಕ: 12.06.2025ರಿಂದ 26.06.2025ರ ವರೆಗೆ ಈ ಕಛೇರಿಗೆ ಸಲ್ಲಿಸಿ ಖಾಲಿ ಟೆಂಡರ್ ಫಾರಂ ಪಡೆಯಬಹುದಾಗಿದೆ.

| ಕ್ರಮ ಸಂಖ್ಯೆ | ವಿವರ | ಸಮಯ |
|---|---|---|
| 1. | ಖಾಲಿ ಟೆಂಡರ್ ಫಾರಂ ವಿತರಿಸುವ ದಿನಾಂಕ | ದಿನಾಂಕ 12.06.2025 ಬೆಳಿಗ್ಗೆ 11:00 ರಿಂದ 26.06.2025 ಸಂಜೆ 05:00 ಗಂಟೆಯವರೆಗೆ. |
| 2. | ತುಂಬಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ದಿನಾಂಕ | ದಿನಾಂಕ 12.06.2025 ಬೆಳಿಗ್ಗೆ 11:00ರಿಂದ 27.06.2025 ಸಂಜೆ 05:00 ಗಂಟೆಯವರೆಗೆ |
| 3. | ಹರಾಜು ನಡೆಯುವ ಸ್ಥಳ ಹಾಗು ಸಮಯ | ಮೀನುಗಾರಿಕಾ ಮಹಾವಿದ್ಯಾಲಯ, ಎಕ್ಕೂರು ದಿನಾಂಕ: 30.06.2025 ರಂದು ಪೂರ್ವಾಹ್ನ 10.30ಗಂಟೆಗೆ<br><br>ಮೀನುಗಾರಿಕಾ ಮಹಾವಿದ್ಯಾಲಯ, ತಾಂತ್ರಿಕ ವಿಭಾಗ, ಹ್ಯೊಗೆ ಬಜಾರ್ ದಿನಾಂಕ: 30.06.2025 ರಂದು ಅಪರಾಹ್ನ 3.00 ಗಂಟೆಗೆ |
| 4. | ಟೆಂಡರ್ ತೆರೆಯುವ ದಿನಾಂಕ | ದಿನಾಂಕ 30.06.2025ರಂದು ಹರಾಜು ಮುಗಿದ ನಂತರ |

ಇತರೆ ಕರಾರು ಮತ್ತು ವಿವರಣೆಗಳನ್ನು ಟೆಂಡರ್ ಫಾರಂ ಜೊತೆಗೆ ಒದಗಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಲಸದ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಈ ಕೆಳಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಟೆಂಡರ್ ಕಂ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದು.

## ಷರತ್ತು ಮತ್ತು ನಿಬಂಧನೆಗಳು

1. ಮೀನುಗಾರಿಕಾ ಮಹಾವಿದ್ಯಾಲಯದಲ್ಲಿ ಎರಡು ಆವರಣಗಳಿದ್ದು ಎರಡೂ ಆವರಣಗಳಿಗೆ ಸಂಬಂಧಿಸಿದ ಇ-ತ್ಯಾಜ್ಯ/ ಅನುಪಯುಕ್ತ ವಸ್ತುಗಳ ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ಪ್ರತ್ಯೇಕವಾಗಿ ನಡೆಸಲಾಗುವುದು. ಈ ಸಂಬಂಧ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

2. ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಪ್ರತಿ ಟೆಂಡರ್ ಫಾರಂಗೆ ರೂ.100/-ನ್ನು ಪಾವತಿಸಿ ಅರ್ಜಿಯನ್ನು ಪಡೆದುಕೊಳ್ಳತಕ್ಕದ್ದು. ತಾವು ಸಲ್ಲಿಸುವ ತುಂಬಿದ, ಸಹಿ ಮಾಡಿದ ಟೆಂಡರ್ ಫಾರಂನ ಜೊತೆಗೆ ರೂ.10,000/- ಠೇವಣಿ ಹಣದ ಡಿ.ಡಿಯನ್ನು ASSISTANT COMPTROLLER, COLLEGE OF FISHERIES, MANGALORE, payable at Mangalore ಇವರ ಹೆಸರಲ್ಲಿ ಪಡೆದು ಲಗತ್ತಿಸತಕ್ಕದ್ದು ಹಾಗೂ ಟೆಂಡರ್ ಫಾರಂನಲ್ಲಿ ಡಿ.ಡಿ.ಯ ವಿವರಗಳನ್ನು ನಮೂದಿಸತಕ್ಕದ್ದು.

3. ಬಹಿರಂಗ ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಮೇಲೆ ತಿಳಿಸಿದ ಠೇವಣಿ ಹಣವನ್ನು ಡೀನ್ ಕಛೇರಿಯಲ್ಲಿ ನಗದು ಮೂಲಕ ಪಾವತಿ ಮಾಡಿ ಹರಾಜಿನಲ್ಲಿ ಭಾಗವಹಿಸಬಹುದು. ಟೆಂಡರ್ ಸಲ್ಲಿಸಿರುವ ಬಿಡ್ಡುದಾರರು ಅಪೇಕ್ಷೆಪಟ್ಟಲ್ಲಿ ಬಹಿರಂಗ ಹರಾಜಿನಲ್ಲಿಯೂ ಸಹ ಭಾಗವಹಿಸಬಹುದು.

4. ಮೊಹರಾದ ಟೆಂಡರನ್ನು ಕಳುಹಿಸುವ ದಿನಾಂಕ ಮುಗಿದ ನಂತರ ಮೇಲೆ ತಿಳಿಸಿರುವ ಅನುಪಯುಕ್ತ ಹಾಗೂ ಇ-ತ್ಯಾಜ್ಯ ವಸ್ತುಗಳನ್ನು ಬಹಿರಂಗವಾಗಿ ಹರಾಜು ಮಾಡಲಾಗುವುದು. ಹರಾಜು ಮುಗಿದ ಕೂಡಲೇ ಮೊಹರಾದ ಟೆಂಡರುಗಳನ್ನು ತೆರೆಯಲಾಗುವುದು. ಕೆಲವು ಬಿಡ್ಡುದಾರರು ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸಿದ್ದ ಪಕ್ಷದಲ್ಲಿ ಅವರುಗಳಲ್ಲಿ ಯಾವ ಬಿಡ್ಡುದಾರರು ಟೆಂಡರ್‌ನಲ್ಲಿ ಅಥವಾ ಹರಾಜಿನಲ್ಲಿ ಬಿಡ್ಡು ಮಾಡಿದ ಮೊತ್ತದಲ್ಲಿ ಯಾವುದು ಹೆಚ್ಚು ಅದನ್ನು ಪರಿಗಣಿಸಲಾಗುವುದು.

5. ಟೆಂಡರ್‌ನಲ್ಲಿ ಅತಿ ಹೆಚ್ಚಿಗೆ ನಮೂದಿಸಿದ ದರವನ್ನು ಅನುಮೋದಿಸುವ/ತಿರಸ್ಕರಿಸುವ ಮತ್ತು ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೆ ಸ್ಥಗಿತಗೊಳಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.

6. ಹರಾಜು ಮುಗಿದ ಕೂಡಲೇ ಯಶಸ್ವಿ ಟೆಂಡರುದಾರರು/ಬಿಡ್ಡುದಾರರು ಠೇವಣಿ ಹಣ ಬಿಟ್ಟು ಹರಾಜಿನಲ್ಲಿ ಕೂಗಿದ ಬೆಲೆಯ/ ಟೆಂಡರ್‌ನಲ್ಲಿ ನಮೂದಿಸಿದ ಅತಿ ಹೆಚ್ಚಿನ ದರದ ಅರ್ಧದಷ್ಟು ಹಣವನ್ನು ಸ್ಥಳದಲ್ಲೇ ಪಾವತಿ ಮಾಡಿ ರಸೀದಿಯನ್ನು ಪಡೆಯಬೇಕು ಉಳಿದ ಅರ್ಧದಷ್ಟು ಹಣವನ್ನು ಹರಾಜು ನಡೆದ ದಿನದಿಂದ 7 ದಿನಗಳೊಳಗೆ ಪಾವತಿ ಮಾಡಿ ರಸೀತಿಯನ್ನು ಪಡೆಯಬೇಕು.

7. ಯಶಸ್ವಿ ಬಿಡ್ಡುದಾರರು ಹಣ ಕಟ್ಟಲು ವಿಫಲರಾದಲ್ಲಿ ಅವರಿಂದ ಪಡೆದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಎರಡನೇ ಅತೀ ಹೆಚ್ಚಿನ ಬಿಡ್ಡುದಾರರಿಗೆ ಕೊಡಬಹುದು ಇಲ್ಲವೇ ಮರುಹರಾಜು ನಡೆಸಲು ಕ್ರಮ ತೆಗೆದುಕೊಳ್ಳಬಹುದು.

8. ಕಡಿಮೆ ದರ ನಮೂದಿಸಿ ಯಶಸ್ವಿಯಾಗದ ಬಿಡ್ಡುದಾರರಿಗೆ ಠೇವಣಿಯಾಗಿಟ್ಟ ಹಣವನ್ನು ಹರಾಜು ಮುಗಿದ ನಂತರ ಹಿಂದಿರುಗಿಸಲಾಗುವುದು. ಇವರುಗಳು ಇದಕ್ಕೆ ಸಂಬಂಧಿಸಿದ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿ ಹಣವನ್ನು ವಾಪಸ್ಸು ಪಡೆಯತಕ್ಕದ್ದು.

9. ಯಾವ ಕಾರಣವನ್ನೂ ನೀಡದೆ ಹರಾಜು ಪ್ರಕ್ರಿಯೆಯನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.

10. ಹರಾಜು ಮುಗಿದ ನಂತರ ಸಂಭವಿಸಬಹುದಾದ ಯಾವುದೇ ನೈಸರ್ಗಿಕ ವಿಕೋಪ ಹಾಗೂ ಕಳ್ಳತನದಿಂದಾಗಬಹುದಾದ ನಷ್ಟಕ್ಕೆ ಅಥವಾ ಬೇರೆ ಯಾವುದೇ ಕಾರಣದಿಂದ ನಷ್ಟವಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ.

11. ಹರಾಜಿನಲ್ಲಿ ಭಾಗವಹಿಸುವವರು ಠೇವಣಿ ಇಡುವ ಮೊದಲೇ ಕಛೇರಿಯ ಕೆಲಸದ ವೇಳೆಯಲ್ಲಿ ಅನುಮತಿ ಪಡೆದು ಅನುಪಯುಕ್ತ ಹಾಗೂ ಇ-ತ್ಯಾಜ್ಯ ವಸ್ತುಗಳನ್ನು ಪರಿಶೀಲಿಸಬಹುದು ಮತ್ತು ತದನಂತರದಲ್ಲಿ ಉದ್ಭವಿಸುವ ಯಾವುದೇ ತಕರಾರುಗಳಿಗೆ ವಿಶ್ವವಿದ್ಯಾಲಯವು ಹೊಣೆಯಾಗಿರುವುದಿಲ್ಲ.

12. ತೆರಿಗೆ/ಸುಂಕ ಇದ್ದ ಪಕ್ಷದಲ್ಲಿ ಬಿಡ್ಡುದಾರರೇ ಕಟ್ಟಬೇಕು.

13. ಪೂರ್ತಿ ಹಣ ಕಟ್ಟಿ ರೂ.100/- ಮೌಲ್ಯದ ಛಾಪಾ ಕಾಗದದಲ್ಲಿ ಕರಾರು ಬರೆದುಕೊಟ್ಟ ನಂತರವೇ ಅನುಪಯುಕ್ತ ಹಾಗೂ ಇ-ತ್ಯಾಜ್ಯ ವಸ್ತುಗಳನ್ನು ಬಿಡ್ಡುದಾರರ ವಶಕ್ಕೆ ಕೊಡಲಾಗುವುದು.

14. ಯಶಸ್ವೀ ಬಿಡ್ಡುದಾರರು ಸದ್ರಿ ವಸ್ತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕಛೇರಿ ಸಮಯದಲ್ಲಿ, ಹರಾಜಿನ ಕೆಲಸಕ್ಕೆ ನಿಯುಕ್ತ ಪಡಿಸಿದ ಅಧಿಕಾರಿಗಳ ಸಮ್ಮುಖದಲ್ಲಿ ಸಾಗಿಸಬೇಕು.

15. ಯಶಸ್ವೀ ಬಿಡ್ಡುದಾರನೆಂದು ಘೋಷಿಸಲ್ಪಟ್ಟ ಬಿಡ್ಡುದಾರರು ಸದ್ರಿ ಟೆಂಡರ್ ಕಂ ಹರಾಜಿಗೆ ಇಟ್ಟ ವಸ್ತುಗಳನ್ನು 7 ದಿನಗಳೊಳಗೆ ಸಾಗಿಸಬೇಕು.

16. ಯಶಸ್ವೀ ಬಿಡ್ಡುದಾರರಿಗೆ ಒಮ್ಮೆ ವಿಲೇವಾರಿ ಮಾಡಿದ ಯಾವುದೇ ವಸ್ತುಗಳನ್ನು ವಿಶ್ವವಿದ್ಯಾಲಯವು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.

17. ಇ- ತ್ಯಾಜ್ಯ ವಸ್ತುಗಳ ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವವರು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ತ್ಯಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಇ-ತ್ಯಾಜ್ಯವನ್ನು ಮರುಬಳಕೆ ಮಾಡುವ/ ಪುನಃ ಸಂಸ್ಕರಣೆ ಮಾಡುವ/ ಡಿಸ್‌ಮೆಂಟಲ್ ಮಾಡುವ/ ಸಂಗ್ರಹಣೆ/ ದಾಸ್ತಾನು ಮಾಡುವವರೆಂದು ನೊಂದಾಯಿಸಿಕೊಂಡಿರಬೇಕು.

18. ಟೆಂಡರ್ ಕಂ ಹರಾಜಿನಲ್ಲಿ ಭಾಗವಹಿಸುವವರು ಭಾರತ ಸರ್ಕಾರದ ಯಾವುದೇ ಇಲಾಖೆಯಿಂದ ಅಥವಾ ಯಾವುದೇ ರಾಜ್ಯದಿಂದ ಅಥವಾ ಯಾವುದೇ ಸಾರ್ವಜನಿಕ ವಲಯದ ಘಟಕ/ ಸರ್ಕಾರದ ಸ್ವಾಯತ್ತ ಸಂಸ್ಥೆಯಿಂದ ಕಪ್ಪು ಪಟ್ಟಿಗೆ ಸೇರಿಸಲ್ಪಟ್ಟಿರಬಾರದು.

ಡೀನ್ (ಮೀನುಗಾರಿಕೆ)



ಡೀನ್ (ಮೀನುಗಾರಿಕೆ)
ಮೀನುಗಾರಿಕಾ ಮಹಾವಿದ್ಯಾಲಯ
ಮಂಗಳೂರು